

ಹೆಂಡತಿ: ಇಂದಿನಿಂದ ನಿಮ್ಮ ಜೊತೆ ಮಾತನಾಡಬಾರದೆಂದು ನಿರ್ಧರಿಸಿದ್ದೇನೆ.

ಗುಂಡ: ಸರಿ

ಹೆಂಡತಿ: ಯಾಕೆ ಅಂತ ತಿಳಿದುಕೊಳ್ಳೋದಿಲ್ವಾ? (ಆಶ್ಚರ್ಯದಿಂದ)

ಗಂಡ: ಅದರ ಅಗತ್ಯವಿಲ್ಲ. ನಿನ್ನ ಮಾತಿನ ಮೇಲೆ ನನಗೆ ಗೌರವವಿದೆ.

★★★

ನಿರೂಪಕ: ರಾಜಕೀಯಕ್ಕೆ ಯಾವಾಗ ಬರ್ತೀರಿ?

ನಟ: ಸಿನಿಮಾಗಳಲ್ಲಿ ಅವಕಾಶ ಕಡಿಮೆ ಆದ ಕೂಡಲೇ!

★★★

ಸುಬ್ರಾವ್: ಟೀ ಕುಡಿಯುವಾಗಲೆಲ್ಲ ನನ್ನ ಕಣ್ಣಲ್ಲಿ ತುಂಬಾ ನೋವಿರುತ್ತೆ ಡಾಕ್ಟ್ರೇ...

ಡಾಕ್ಟರ್: ಮಾತ್ರೆಗಳೇನೂ ಅವಶ್ಯವಿಲ್ಲ ರಾಯ್ರೇ ಟೀ ಕುಡಿಯುವಾಗ ಗ್ಲಾಸ್‌ನಿಂದ ಸ್ಪೂನ್ ತೆಗೆದು ಕುಡಿಯಿರಿ. ಅದೇ ನಿಮ್ಮ ಕಣ್ಣಿಗೆ ಚುಚ್ಚುತ್ತಿರುವುದು.

★★★

ವಿನಯ: ಚಂದ್ರಲೋಕಕ್ಕೆ ಆ ನಾಯಿಯನ್ನು ಯಾಕೆ ಕರೆದೊಯ್ದರಂತೆ?

ನರಹರಿ: ರಾಕೆಟ್‌ನ ಯಾರಾದ್ರೂ ಕಳ್ಳತನ ಮಾಡಿದ್ರೆ... ಬೊಗಳಿ ಎಬ್ಬಿಸೋಕೆ ಬೇಕಲ್ವೇ! ಅಪರಿಚಿತ ಜಾಗ ಬೇರೆ!

★★★

ರಾಜು: ಏನಯ್ಯಾ ನಿನ್ನ ಹೆಂಡತಿ ಕರಾಟೆಯಲ್ಲಿ ಬ್ಲ್ಯಾಕ್ ಬೆಲ್ಟ್ ಅಂತೆ... ಜಗಳ ಆದರೆ ನಿನಗೇ ತೊಂದರೆ ಅಲ್ವಾ?

ರಾಮು: ನೀನು ಹೇಳೋದೇನೋ ನಿಜ. ಆದ್ರೆ ನಾನು ರನ್ನಿಂಗ್‌ನಲ್ಲಿ ಗೋಲ್ಡ್ ಮೆಡಲ್ ಅನ್ನೋ ಸಂಗತಿ ಮರೆತು ಬಿಟ್ಟೆಯಾ ಹೇಗೆ!

(ಸಂಗ್ರಹ) **ರಾಮಪ್ರಸಾದ. ಬಿ., ಹೊಸಪೇಟೆ**

---

ಗುಂಡನ ಪತ್ನಿ: ಗಂಡಸರಿಗೆ ಸ್ವರ್ಗದಲ್ಲಿ ಅಪ್ಸರೆ ಸಿಗುತ್ತಾಳೆ ಅಂತ, ಒದಿನ ನೆನಪು, ಹೆಂಗಸರಿಗೆ ಯಾರು ಸಿಗಬಹುದು?

ಗುಂಡ: ಕೋತಿಗಳು ಅಂತ ಯಾರೋ ಹೇಳಿದ್ದು ಕೇಳಿದ್ದೆ.

ಪತ್ನಿ: ಇದು ಮಹಾ ಮೋಸ ಕಣ್ರಿ, ನಿಮಗೆ ಇಲ್ಲಿಯೂ ಅಪ್ಸರೆ, ಅಲ್ಲಿಯೂ ಅಪ್ಸರೆ. ನನಗೆ ಇಲ್ಲಿಯೂ ಕೋತಿ, ಅಲ್ಲಿಯೂ ಕೋತಿ.

★★★

ಯಮರಾಯ ಒಮ್ಮೆ ನರಕದಲ್ಲಿ ಸುತ್ತಾಡುತ್ತಿದ್ದಾಗ, ಒಂದು ಸಣ್ಣ ಗುಂಪು ಕಡ್ಲೆಕಾಯಿ ತಿನ್ನುತ್ತಾ, ಹರಟುತ್ತಾ, ನಗುತ್ತಿರುವುದು ಕಾಣಿಸಿತು.

ಯಮ: ಇದ್ಯಾರಪ್ಪ, ನರಕದಲ್ಲೂ ಹೀಗೆ ಹಾಯಾಗಿದ್ದಾರಲ್ಲ?

ಚಿತ್ರಗುಪ್ತ: ಪ್ರಭು, ಇವರು ಬೆಂಗಳೂರಿಗರಂತೆ, ಅಲ್ಲಿಗಿಂತ, ಚೆನ್ನಾಗಿದೆ ಅಂತ ಇಲ್ಲೇ ಸೆಟ್ಲ್ ಆಗಿ ಬಿಟ್ಟಿದ್ದಾರೆ.

★★★

ಗೆಳೆಯ: ಸಾರಿ ಕಣೋ, ನಿನ್ನ ಹೆಂಡ್ತಿ ಹೋಗ್ಬಿಟ್ಟಳಂತೆ, ಅವಳ ತಂಗಿಯನ್ನೇ ಮಾಡ್ಕೊಂಡೆಯಂತೆ, ಏನು ವಿಷ್ಯ?

ಗುಂಡ: ಹೊಸ ಅತ್ತೆ ಹೇಗೋ, ಏನೊ? ಗೊತ್ತಿರೋ ಹಳೆ ಅತ್ತೇನೆ ವಾಸಿ ಅಲ್ವ?

★★★

ಗುಂಡ ಗೆಳೆಯ ನೊಂದಿಗೆ 'ಜೂ'ಗೆ ಹೋಗಿದ್ದಾಗ, ಹುಲಿಯ ಗರ್ಜನೆ ಕೇಳಿ ಭಯ ಗೊಂಡ...

ಗೆಳೆಯ: ನಿನಗೆ ಭಯ ಆಗ್ಲಿಲ್ವ?

ಗುಂಡ: ಇದಕ್ಕಿಂತ ಸ್ಟ್ರಾಂಗಾದ ಗರ್ಜನೆ ಕೇಳಿ, ಕೇಳಿ ಅಭ್ಯಾಸವಾಗಿದೆ.

ಗೆಳೆಯ: ಎಲ್ಲಿ?

ಗುಂಡ: ಮನೆಯಲ್ಲಿ!

(ಸಂಗ್ರಹ) **ಹಾಡ್ಯ ಬ.ಜಯಾನಂದ, ಮೈಸೂರು**

ವಿನೋದ್: ನೀನು ನಿನ್ನ ಹಿಂದಿನ ಕೆಲಸ ಏಕೆ ಬಿಟ್ಟೆ?

ನಾರಾಯಣ: ಯಜಮಾನ ಏನೋ ಹೇಳಿದರು.

ವಿನೋದ್: ಅವರು ಬೈದರೆ?

ನಾರಾಯಣ: ಹಾಗೇನಿಲ್ಲ

ವಿನೋದ್: ಹಾಗಾದರೆ ಏನೆಂದರು?

ನಾರಾಯಣ: ನಿನ್ನನ್ನು ವಜಾಗೊಳಿಸಿದ್ದೇನೆ ಅಂದರು.



★★★

ಮದುವೆಯಾದ ಹೊಸತರಲ್ಲಿ ಸುಖವಂತಳ ಪತಿ ದಿನದ ಕೆಲಸ ಮುಗಿಸಿ, ಮನೆಗೆ ಹಿಂತಿರುಗಿದಾಗ ಕೆಟ್ಟ ಸುದ್ದಿ ಕಾದಿತ್ತು. 'ನನ್ನಿಂದ ತಪ್ಪಾಯಿತು' ಎಂದ. ಸುಖವಂತ್ ಅಳುತ್ತಾ, 'ನಾನು ನಿಮ್ಮ ಅತ್ಯುತ್ತಮ ಸೂಟಿಗೆ ಇಸ್ತ್ರಿ ಹಾಕುತ್ತಿದ್ದಾಗ ಷರಾಯಿ ಕುಳಿತುಕೊಳ್ಳುವೆಡೆ ಸುಟ್ಟು ತೂತಾಯಿತು.'

'ಚಿಂತಿಸಬೇಡ, ಚಿನ್ನಾ.' ಎಂದ ಆತ. 'ಆ ಸೂಟಿಗೆ ಸರಿ ಹೊಂದುವ ಇನ್ನೊಂದು ಷರಾಯಿ ನನ್ನಲ್ಲಿದೆ.' 'ಹೌದು ಗೊತ್ತಿದೆ', ಎಂದಳಾಕೆ. 'ನೀವು ಅದನ್ನು ಹೊಂದಿರುವುದು ಅದೃಷ್ಟ. ಅದಿರುವುದರಿಂದ, ರಂಧ್ರವನ್ನು ಮುಚ್ಚಲು ಸಾಧ್ಯವಾಯಿತು.'

★★★

ಹಣ ಮಾಡಲೆತ್ನಿಸುತ್ತಿದ್ದವ ದೇವರಿಗೆ ಕೇಳಿದ: 'ಓ ದೇವರೇ, ನಿಮ್ಮ ದಶ ಲಕ್ಷ ವರ್ಷಗಳೆಂದರೆ ಎಷ್ಟು ಕಾಲ?' 'ದೇವರು ಉತ್ತರಿಸಿದರು: 'ಅದು ಒಂದು ನಿಮಿಷದ ಹಾಗೆ!' ದಶ ಲಕ್ಷ ಡಾಲರುಗಳು ಎಷ್ಟಾಗುತ್ತವೆ?' 'ಅದು ಒಂದು ಪೆನ್ನಿಯ ಹಾಗೆ.' ಅಂತಿಮವಾಗಿ ಆತ. 'ನೀವು ನನಗೆ ಒಂದು ಪೆನ್ನಿ ಕೊಡುವಿರಾ?' ಎಂದ. ದೇವರೆಂದರು 'ಖಂಡಿತ, ಒಂದು ನಿಮಿಷ.'

(ಸಂಗ್ರಹ) **ಎನ್. ನಾರಾಯಣ ಬಲ್ಲಾಳ**